

# ಕಾಡಿಗೆ ಬೆಂಕಿ, ನಾಡಿಗೆ ಬರೆ

**ಛಿಳಿ ಛಿಳಿಲು ಛಿಳಿ ರವದ ಘುಳು ಘುಳು**
**ಘುಳು ಘುಳು ಧ್ವನಿಮಯದಿ ಕಪಿಗಳ**
**ಕಿಳಕಿಳಾಯತ ರವದಿ ಮೃಗ ಸಂಕುಳದ ಕಳಕಳದಿ**
**ಹಿಳಿದುರಿವ ಹೆಬ್ಬಿದಿರ ಗಂಟಿನ**
**ಠಳ ಠಳತ್ಕಾರದಿ ದಿಶಾ ಮಂ**
**ಡಳದ ಮೂಲೆಗಳೊಡೆದುದದ್ಭುತವಾಯ್ತು ವನದಹನ**

ಮಹಾಭಾರತದಲ್ಲಿನ ಜನಪ್ರಿಯ ಉಪಕಥನಗಳಲ್ಲೊಂದಾದ 'ಖಾಂಡವ ವನ ದಹನ'ವನ್ನು ಕುಮಾರವ್ಯಾಸ ವರ್ಣಿಸುವುದು ಹೀಗೆ. ಬೆಂಕಿಯ ಕೆನ್ನಾಲಿಗೆಗಳು ಖಾಂಡವ ವನವನ್ನು ಆವರಿಸಿಕೊಂಡಾಗ – ಛಿಳಿ ಛಿಳಿ, ಘುಳು ಘುಳು ಎನ್ನುವ ಶಬ್ದಗಳ ಜೊತೆಗೆ ಕಪಿಗಳ ಕಿಳಕಿಳ ಧ್ವನಿಯೂ ಮೃಗಗಳ ಕಳವಳವೂ ಸೇರಿಕೊಂಡು, ಹಿರಿದಾದ ಬಿದಿರಿನ ಗಂಟುಗಳು ಠಳ ಠಳ ಎಂದು ಸದ್ದು ಮಾಡುತ್ತಿರುವಾಗ, ದಿಕ್ಕುಗಳ ಮೂಲೆಗಳು ಸ್ಫೋಟಿಸಿದಂತೆ ಖಾಂಡವ ವನ ಅದ್ಭುತವಾಗಿತ್ತು ಎನ್ನುವುದು ಮಹಾಕವಿಯ ಬಣ್ಣನೆ. ರೌದ್ರದ ಜೊತೆಗೆ ಸ್ವಲ್ಪಮಟ್ಟಿಗಿನ ರಮಣೀಯತೆಯೂ ಇರುವ ಈ ಕಾವ್ಯಭಾಗ ಕಲ್ಪನೆಯೇನಲ್ಲ. ಕಾಳ್ಗಿಚ್ಚಿನ ಸ್ವರೂಪ ಹೇಗಿರುತ್ತದೆ ಎನ್ನುವುದಕ್ಕೆ ಬಂಡೀಪುರದ ಉದಾಹರಣೆ ಕಣ್ಣೆದುರೇ ಇದೆ.

ಬಂಡೀಪುರದ ಕಾಡಿಗೆ ಬೆಂಕಿ ಹೊಸತೇನೂ ಅಲ್ಲ. ಅದು ಪ್ರತಿ ಬೇಸಗೆಯ ಅಭ್ಯಾಗಥ. ಆದರೆ, ಈ ಬಾರಿಯ ಕಿಚ್ಚು ಇತ್ತೀಚಿನ ವರ್ಷಗಳಲ್ಲೇ ಭೀಕರವಾದುದು. ಆ ಬೆಂಕಿಯ ಬಲೆಗಳ ಕಥನಗಳನ್ನು ಅವಲೋಕಿಸಿದರೆ, ಬೆಂಕಿಯ ಕೆನ್ನಾಲಗೆಗಳು ನಮ್ಮ ಮನಸ್ಸಿನೊಳಗೇ ಉರಿಯತೊಡಗುತ್ತವೆ. ಆ ಬೆಂಕಿಯ ಜ್ವಾಲೆಗಳಲ್ಲಿ ನಮ್ಮ ಮುಖವೂ ಮುಖವಾಡಗಳೂ ಕಾಣಿಸುತ್ತವೆ.

2014ರ ಮಾರ್ಚ್ ತಿಂಗಳು. ಬಂಡೀಪುರ ರಾಷ್ಟ್ರೀಯ ಉದ್ಯಾನದಲ್ಲಿ ಬಿದಿರು ಹೂ ಬಿಟ್ಟು ಒಣಗಿಹೋಗಿತ್ತು. ಇನ್ನೂ ಪೂರ್ವ ಮುಂಗಾರಿನ ಸುಳಿವು ಇರಲಿಲ್ಲ. ಆಗೊಮ್ಮೆ ಹೀಗೊಮ್ಮೆ ಕಪ್ಪುಮೋಡಗಳು ಭೂಮಿಯನ್ನು ನುಂಗಿಬಿಡುವಂತೆ ಹೆಪ್ಪುಗಟ್ಟಿದರೂ ಮಳೆಯ ಹನಿಗಳು ಮಾತ್ರ ತೊಟ್ಟಿಕ್ಕಿರಲಿಲ್ಲ. ಹುಲ್ಲು, ಮರ–ಗಿಡಗಳು ಒಣಗಿ ಕಾಡು ಬಡವಾಗಿತ್ತು. ಆ ಬೇಸಿಗೆಯ ಮಧ್ಯಾಹ್ನ ಬಂಡೀಪುರ ವ್ಯಾಪ್ತಿಯ ಮಂಗಲ ಗ್ರಾಮದ ಬಳಿ ಇರುವ ಸಣ್ಣ ಕೆರೆಯ ಬಳಿಗೆ ಐವರು ಯುವಕರ ಗುಂಪೊಂದು ಬಂದಿತು. ಅದಾಗಲೇ, ಕೆರೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿತ್ತು. ಅವರಿಗೆ ಮೀನುಗಳ ರುಚಿನೋಡುವ ತವಕ. ಅವರೊಳಗಿದ್ದ ಮೀನುಗಾರ ಒಮ್ಮೆಲೆ ಜಾಗೃತನಾದ. ಸೊಪ್ಪೆಪರದೆ ಹಿಡಿದು ಉತ್ಸಾಹದಿಂದಲೇ ನೀರಿಗೆ ಇಳಿದರು. ಸುಪ್ರೀಂ ಕೋರ್ಟ್ ಆದೇಶದ ಅನ್ವಯ ರಾಷ್ಟ್ರೀಯ ಉದ್ಯಾನಗಳು ಮತ್ತು ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಜಲಮೂಲಗಳಲ್ಲಿ ಮೀನುಗಾರಿಕೆ ನಿಷಿದ್ಧ.

ಅರಣ್ಯ ಸಿಬ್ಬಂದಿ ಈ ಕಾನೂನಿನ ಬಗ್ಗೆ ಗುಂಪಿಗೆ ಮನವರಿಕೆ ಮಾಡಿಕೊಟ್ಟರು. ಯುವಕರು ಅವರ ಮಾತಿಗೆ ಕಿವಿಗೊಡಲಿಲ್ಲ. ಕೊನೆಗೆ, ಸಿಬ್ಬಂದಿ ಅವರನ್ನು ವಶಕ್ಕೆ ಪಡೆದರು.

ಈ ಘಟನೆ ಗಿರಿಜನರ ಹಾಡಿಗಳಲ್ಲಿ ಸಂಚಲನ ಸೃಷ್ಟಿಸಿತು. ಮಾರನೇ ದಿನವೇ ಮಂಗಲಕ್ಕೆ ಸಾಗುವ ದಾರಿಯಲ್ಲಿಯೇ ಒಣಗಿ ನಿಂತಿದ್ದ ಬಿದಿರಿನ ಮೆಳೆಗಳಿಗೆ ಬೆಂಕಿ ಬಿದ್ದಿತು. ಸತತವಾಗಿ ಮೂರ್ನಾಲ್ಕು ದಿನಗಳ ಕಾಲ ಉರಿದ ಬೆಂಕಿಗೆ ಕಾಡು ಸುಟ್ಟು ಭಸ್ಮವಾಯಿತು. ನೂರಾರು ವನ್ಯಜೀವಿಗಳು ಪ್ರಾಣತೆತ್ತವು. ನೆಲವಾಸಿ ಹಕ್ಕಿಗಳ ಬದುಕು ಛಿದ್ರಗೊಂಡಿತು.

## ಕಾಳ್ಗಿಚ್ಚಿಗೆ ಕಾರಣಗಳೇನು?

ಕರ್ನಾಟಕದಲ್ಲಿ ಅರಣ್ಯಕ್ಕೆ ಬೆಂಕಿ ಬೀಳುವುದು ಪ್ರತಿವರ್ಷವೂ ಸುದ್ದಿಯಾಗುತ್ತಲೇ ಇದೆ. ಅದರಲ್ಲೂ ಕಾಳ್ಗಿಚ್ಚಿಗೆ ಹೆಚ್ಚಾಗಿ ತುತ್ತಾಗುವುದು ಹುಲಿ ಸಂರಕ್ಷಿತ ಪ್ರದೇಶ ಮತ್ತು ವನ್ಯಜೀವಿಧಾಮಗಳೇ.

ಕಾಡಿನ ಬೆಂಕಿ ನೈಸರ್ಗಿಕ ಪ್ರಕ್ರಿಯೆ ಎನ್ನುವುದು ತಪ್ಪು. ಇದರ ಮೂಲ ಸಂಪೂರ್ಣ ಮಾನವ ನಿರ್ಮಿತ. ಉದ್ದೇಶಪೂರ್ವಕವಾಗಿ, ದುರುದ್ದೇಶದಿಂದ, ತಮಾಷೆಗಾಗಿ ಇಡುವ ಬೆಂಕಿ ಸೃಷ್ಟಿಸುವ ಅನಾಹುತಕ್ಕೆ ಕೊನೆ ಎಂಬುದಿಲ್ಲ. ಫೆಬ್ರುವರಿಯಿಂದ ಮೇ ತಿಂಗಳವರೆಗೆ ಬೇಸಿಗೆಯ ಪ್ರಖರತೆ ಹೆಚ್ಚಿರುತ್ತದೆ. ಉಷ್ಣವಲಯದ ಕಾಡಿನ ನೆಲ ತರಗೆಲೆಗಳ ಹಾಸಿನಿಂದ ಮುಚ್ಚಿಕೊಂಡಿರುತ್ತದೆ. ಇದಕ್ಕೆ ಸಣ್ಣದೊಂದು ಕಿಡಿ ತಾಗಿದರೂ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುತ್ತದೆ.